ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1992.

# *ತಂದೆಯ ಮೇಲಿನ ಸ್ನೇಹದ ಚಿಹ್ನೆ- ತಂದೆಯ ಸಮಾನರಾಗುವುದು*

(अव्यक्त दिवस पर अव्यक्त बापदादा अपने बच्चों प्रति बोले)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ದಿನೋತ್ಸವದಂದು ಅವ್ಯಕ್ತ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬೇಹದ್ದಿನ ಮಾತಾಪಿತರ ಸನ್ಮುಖದಲ್ಲಿ ಇಡೀ ಬೇಹದ್ದಿನ ಪರಿವಾರವಿದೆ. ಕೇವಲ ಈ ಸಭೆಯಲ್ಲ. ನಾಲ್ಕಾರು ಕಡೆಯ ಸ್ನೇಹಿ-ಸಹಯೋಗಿ ಮಕ್ಕಳ ಚಿಕ್ಕದಾದ ಬ್ರಾಹ್ಮಣ ಪರಿವಾರ ಅತೀಪ್ರಿಯ ಮತ್ತು ಅತಿಭಿನ್ನ ಪರಿವಾರ, ಅಲೌಕಿಕ ಪರಿವಾರ. ಚಿತ್ರದಲ್ಲಿರುತ್ತಾ ವಿಚಿತ್ರ ಅಮೂಲ್ಯ ಪರಿವಾರವು ಸನ್ಮುಖದಲ್ಲಿದೆ. ಬಾಪ್‌ದಾದಾ ಅಮೃತವೇಳೆಯಿಂದ ಎಲ್ಲಾ ಮಕ್ಕಳ ಸ್ನೇಹದ, ಮಿಲನವನ್ನು ಆಚರಿಸುವ ವರದಾನವನ್ನು ತೆಗೆದುಕೊಳ್ಳುವ ಮಧುರಾತಿಮಧುರ ವಾರ್ತಾಲಾಪವನ್ನು ಕೇಳಿಸಿಕೊಳ್ಳುತ್ತಿದ್ದೆವು. ಎಲ್ಲರ ಮನಸ್ಸಿನಲ್ಲಿ ಸ್ನೇಹದ ಭಾವನೆ ಮತ್ತು ಸಮಾನರಾಗುವ ಶ್ರೇಷ್ಠ ಕಾಮನೆ- ಇದೇ ಉಮ್ಮಂಗ-ಉತ್ಸಾಹವನ್ನು ನಾಲ್ಕೂಕಡೆ ನೋಡಿದೆವು. ಇಂದಿನ ದಿನ ಮೆಜಾರಿಟಿ ಮಕ್ಕಳ ಮುಂದೆ ನಂಬರ್‌ವನ್ ಶ್ರೇಷ್ಠಾತ್ಮ ಬ್ರಹ್ಮಾ ಮಾತಾಪಿತ ಪ್ರತ್ಯಕ್ಷ ರೂಪದಲ್ಲಿದ್ದರು. ಎಲ್ಲರ ಹೃದಯದಲ್ಲಿ ಇಂದು ವಿಶೇಷ ಪ್ರೀತಿಯ ಸಾಗರ ಬಾಪ್ ದಾದಾರವರ ಪ್ರೇಮಸ್ವರೂಪವು ಪ್ರತ್ಯಕ್ಷದಲ್ಲಿ ನಯನಗಳ ಮುಂದೆ ಇತ್ತು. ನಾಲ್ಕಾರು ಕಡೆಯ ಸರ್ವಮಕ್ಕಳ ಸ್ನೇಹದ ಹೃದಯದ ಗೀತೆಯನ್ನು ಬಾಪ್‌ದಾದಾ ಕೇಳಿದರು. ಸ್ನೇಹದ ಪ್ರತಿಯಾಗಿ ವರದಾತ ತಂದೆಯು ಮಕ್ಕಳಿಗೆ ಇದೇ ವರದಾನ ನೀಡುತ್ತಿದ್ದಾರೆ- **"ಸದಾ ಪ್ರತೀ ಸಮಯ ಪ್ರತಿಯೊಬ್ಬ ಆತ್ಮನೊಂದಿಗೆ, ಪ್ರತೀ ಪರಿಸ್ಥಿತಿಯಲ್ಲಿ ಸ್ನೇಹಿಮೂರ್ತಿ ಭವ"** ಎಂದು ತಮ್ಮ ಸ್ನೇಹಿಮೂರ್ತಿ. ಸ್ನೇಹದ ಗುಣ. ಸ್ನೇಹೀ ವ್ಯವಹಾರ, ಸ್ನೇಹದ ಸಂಬಂಧ-ಸಂಪರ್ಕವನ್ನು ಬಿಡಬೇಡಿ. ಮರೆಯಬೇಡಿರಿ. ಯಾವುದೇ ವ್ಯಕ್ತಿ. ಪ್ರಕೃತಿ. ಮಾಯೆ ಎಂತಹದ್ದೇ ವಿಕರಾಳರೂಪ. ಜ್ವಾಲಾರೂಪವನ್ನು ಧಾರಣೆ ಮಾಡಿಕೊಂಡು ಸನ್ಮುಖ ಬರಲಿ ಆದರೆ ವಿಕರಾಳ ಜ್ವಾಲಾರೂಪವನ್ನು ಸದಾ ಸ್ನೇಹದ ಶೀತಲತೆಯ ಮೂಲಕ ಪರಿವರ್ತನೆ ಮಾಡುತ್ತಾ ಇರಿ. ಈ ಹೊಸವರ್ಷದಲ್ಲಿ ವಿಶೇಷವಾಗಿ ಸ್ನೇಹವನ್ನು ಕೊಡಬೇಕು. ಸ್ನೇಹವನ್ನು ಪಡೆಯಬೇಕಾಗಿದೆ. ಸದಾ ಸ್ನೇಹದ ದೃಷ್ಟಿ. ಸ್ನೇಹದ

ವೃತ್ತಿ, ಸ್ನೇಹಮಯಿ ಕೃತಿಯ ಮೂಲಕ ಸ್ನೇಹೀ ಸೃಷ್ಟಿಯನ್ನು ತಯಾರು ಮಾಡಬೇಕಾಗಿದೆ. ಯಾರೂ ಸ್ನೇಹ ಕೊಡದೇ ಇರಲಿ ಆದರೆ ತಾವು ಮಾಸ್ಟರ್ ಸ್ನೇಹಸ್ವರೂಪ ಆತ್ಮರು ದಾತನಾಗಿ ಆತ್ಮಿಕ ಸ್ನೇಹವನ್ನು ಕೊಡುತ್ತಾ ಹೋಗಿ. ಈಗಿನ ಜೀವಾತ್ಮರು ಸ್ನೇಹ ಅರ್ಥಾತ್ ಸತ್ಯಪ್ರೀತಿಗೆ ಬಾಯಾರಿದ್ದಾರೆ. ಸ್ನೇಹದ ಒಂದು ಘಳಿಗೆ ಅರ್ಥಾತ್ ಒಂದು ಹನಿಗೆ ಬಾಯಾರಿದ್ದಾರೆ. ಸತ್ಯಸ್ನೇಹವು ಇಲ್ಲದೇ ಇರುವ ಕಾರಣ ವ್ಯಾಕುಲರಾಗಿ ಅಲೆದಾಡುತ್ತಿದ್ದಾರೆ. ಸತ್ಯ ಆತ್ಮಿಕ ಸ್ನೇಹವನ್ನು ಹುಡುಕುತ್ತಿದ್ದಾರೆ. ಇಂತಹ ಬಾಯಾರಿದ ಆತ್ಮರಿಗೆ ಆಶ್ರಯವನ್ನು ನೀಡುವಂತಹ ತಾವು ಮಾಸ್ಟರ್ ಜ್ಞಾನಸಾಗರರಾಗಿದ್ದೀರಿ. ತಮ್ಮೊಂದಿಗೆ ತಾವು ಕೇಳಿಕೊಳ್ಳಿ- ತಾವೆಲ್ಲಾ ಆತ್ಮರನ್ನು ಬ್ರಾಹ್ಮಣ ಪರಿವಾರದಲ್ಲಿ ಪರಿವರ್ತನೆ ಮಾಡುವ ಆಕರ್ಷಿತ ಮಾಡುವ ವಿಶೇಷ ಆಧಾರವು ಏನಿತ್ತು? ಇದೇ ಸತ್ಯಪ್ರೀತಿ, ಮಾತಾಪಿತರ ಪ್ರೀತಿ, ಆತ್ಮಿಕ ಪರಿವಾರದ ಪ್ರೀತಿ- ಈ ಪ್ರೀತಿಯ ಪ್ರಾಪ್ತಿಯು ಪರಿವರ್ತನೆ ಮಾಡಿತು. ಜ್ಞಾನವನ್ನು ನಂತರ ತಿಳಿದುಕೊಂಡಿದ್ದೀರಿ ಆದರೆ ಮೊದಲು ಆಕರ್ಷಣೆ ಮಾಡಿರುವು ಸತ್ಯ, ನಿಸ್ವಾರ್ಥ, ಪಾರಿವಾರದ ಪ್ರೀತಿ. ಇದೇ ಫೌಂಡೇಷನ್ ಆಯಿತಲ್ಲವೆ. ಇದರಿಂದಲೇ ಎಲ್ಲರೂ ಬಂದರಲ್ಲವೆ. ವಿಶ್ವದಲ್ಲಿ ಲಕ್ಷಾಧೀಶ್ವರ ಕೋಟ್ಯಾಧೀಶ್ವರರು ಬಹಳ ಮಂದಿ ಇದ್ದಾರೆ ಆದರೆ ಪರಮಾತ್ಮನ ಸತ್ಯಪ್ರೀತಿಗೆ ಭಿಕಾರಿಯಾಗಿದ್ದಾರೆ- ಏಕೆ" ಲಕ್ಷ, ಕೋಟಿಗಳಿಂದ ಈ ಪ್ರೀತಿ ಸಿಗುವುದಿಲ್ಲ. ವಿಜ್ಞಾನದವರು ಎಷ್ಟೇ ಅಲ್ಪಕಾಲದ ಸುಖದ ಸಾಧನಗಳನ್ನು ವಿಶ್ವಕ್ಕೆ ನೀಡಿದ್ದಾರೆ ಆದರೆ ಎಷ್ಟು ದೊಡ್ಡ ವೈಜ್ಞಾನಿಕ ಸಾಧನಗಳನ್ನು ತಯಾರಿಸುತ್ತಿದ್ದಾರೆಯೋ ಮತ್ತಷ್ಟು ಸಂಶೋಧನೆ ಮಾಡೋಣ. ಇನ್ನೂ ಸಂಶೋಧನೆ ಮಾಡೋಣವೆಂಬುದರಲ್ಲಿಯೇ ಮುಳುಗಿದ್ದಾರೆ. ಸಂತುಷ್ಟತೆಯ ಅನುಭೂತಿ ಇಲ್ಲ. ಮತ್ತಷ್ಟು ಮಾಡೋಣ ಎಂಬುದರಲ್ಲಿಯೇ ಸಮಯವನ್ನು ಕಳೆಯುತ್ತಾರೆ. ಅವರ ಸಂಸಾರವೇ ಸಂಶೋದನೆ ಮಾಡುವುದಾಗಿಬಿಟ್ಟಿದೆ. ತಮ್ಮ ಹಾಗೆ ಸ್ನೇಹಸಂಪನ್ನ ಜೀವನದ ಅನುಭೂತಿಯಿಲ್ಲ. ರಾಜನೇತರನ್ನು ನೋಡಿ ತಮ್ಮ ಕುರ್ಚಿಯನ್ನು ಸಂಭಾಲನೆ ಮಾಡುವುದರಲ್ಲಿ ತೊಡಗಿದ್ದಾರೆ. ನಾಳೆ ಏನಾಗುವುದೋ ಎಂಬ ಚಿಂತೆಯಲ್ಲಿ ತೊಡಗಿದ್ದಾರೆ ಮತ್ತು ತಾವು ಬ್ರಾಹ್ಮಣರು ಸದಾ ಪರಮಾತ್ಮನ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಿದ್ದೀರಿ ನಾಳೆಯ ಚಿಂತೆಯಿಲ್ಲ. ನಾಳೆಯ ಚಿಂತೆಯಾಗಲಿ, ಸಾವಿನ ಚಿಂತೆಯಾಗಲಿ ಇಲ್ಲ. ಏಕೆ? ಏಕೆಂದರೆ ನಿಮ ತಿಳಿದಿದೆ- ಏನಾಗುತ್ತಿದೆಯೋ ಅದು ಒಳ್ಳೆಯದೇ, ಏನಾಗುವುದೋ ಅದು ಇನ್ನೂ ಒಳ್ಳೆಯದೇ. ಆದ್ದರಿಂದ ಒಳ್ಳೆಯದು, ಒಳ್ಳೆಯದು ಎಂದು ಹೇಳುತ್ತಾ ಒಳ್ಳೆಯವರಾಗಿಬಿಟ್ಟಿದ್ದೀರಿ.

ಬ್ರಾಹ್ಮಣ ಜೀವನ ಅರ್ಥಾತ್ ಕೆಟ್ಟದಕ್ಕೆ ಬೀಳ್ಕೊಡುಗೆ ನೀಡುವುದು ಮತ್ತು ಸದಾ ಎಲ್ಲವೂ ಒಳ್ಳೆಯದಕ್ಕಿಂತ ಒಳ್ಳೆಯದಾಗಿದೆ- ಇದರ ಶುಭಾಷಯಗಳನ್ನು ಆಚರಿಸುವುದು. ಈ ರೀತಿ ಮಾಡುತ್ತೀರಾ ಅಥವಾ ಇನ್ನೂ ವಿದಾಯಿ ನೀಡುತ್ತಿದ್ದೀರಾ? ಹೇಗೆ ಹಳೆಯ ವರ್ಷಕ್ಕೆ ಬೀಳ್ಕೊಡುಗೆ ಕೊಟ್ಟರೆ, ಹೊಸ ವರ್ಷಕ್ಕಾಗಿ ಶುಭಾಷಯ ನೀಡಿದಿರಲ್ಲವೆ. ಬಹಳಷ್ಟು ಬಂದಿವೆ. ಅನೇಕ ಮಕ್ಕಳ ಶುಭಾಷಯಗಳ ಪತ್ರಗಳು ಹಾಗೂ ಕಾರ್ಡುಗಳು ಬಂದಿವೆ. ಹೇಳುವುದೇನೆಂದರೆ ಹೇಗೆ ಹೊಸವರ್ಷದ ಪತ್ರಗಳನ್ನು ತಲುಪಿಸಿದ್ದೀರಿ ಅಥವಾ ಸಂಕಲ್ಪವೂ ಮಾಡಿದಿರಿ. ಸಂಗಮಯುಗದಲ್ಲಿ ಪ್ರತೀ ಸೆಕೆಂಡ್ ಹೊಸದಲ್ಲವೆ! ಸಂಗಮಯುಗದ ಪ್ರತೀ ಸೆಕೆಂಡಿನ ಶುಭಾಷಯದ ಪತ್ರವನ್ನ ಕಳುಹಿಸಬೇಡಿ, ಪತ್ರಗಳನ್ನು ಸಂಭಾಲನೆ ಮಾಡುವುದೇ ಕಷ್ಟವಾಗಿಬಿಡುತ್ತದೆ ಆದರೆ ಕಾರ್ಡಿನ ಬದಲು ರೆಕಾರ್ಡ್ ಇಟ್ಟುಕೊಳ್ಳಿರಿ. ಪ್ರತೀ ಸೆಕೆಂಡ್ ಹೊಸ ಅನುಭವ ಮಾಡಿದೆನಾ? ಪ್ರತೀ ಹೊಸ ಸೆಕೆಂಡ್ ಹೊಸ ಉಮ್ಮಂಗ ಉತ್ಸಾಹದ ಅನುಭವ ಮಾಡಿದ್ದೇನೆಯೇ? ಪ್ರತೀ ಸೆಕೆಂಡ್ ನನ್ನಲ್ಲಿ ನವೀನತೆ ಅರ್ಥಾತ್ ದಿವ್ಯತೆಯ ವಿಶೇಷತೆಯ ಯಾವ ಅನುಭವ ಮಾಡಿದೆನು? ಅದಕ್ಕೆ ಶುಭಾಷಯಗಳನ್ನು ನೀಡುತ್ತೇವೆ. ತಾವು ಬ್ರಾಹ್ಮಣ ಅತ್ಮರ ಪ್ರತೀ ಸಮಯ ಎಲ್ಲದಕ್ಕಿಂತ ಅತಿದೊಡ್ಡ ಸಮಾರಂಭ ಯಾವುದಾಗಿದೆ? ಸಮಾರಂಭ ಅರ್ಥಾತ್ ಖುಷಿಯ ಸಮಯ ಅಥವಾ ಖುಷಿಯ ದಿನ. ಸಮಾರಂಭದಲ್ಲಿ ಎಲ್ಲದಕ್ಕಿಂತ ದೊಡ್ಡ ಮಾತು ಮಿಲನ ಮಾಡುವುದಾಗಿರುತ್ತದೆ. ಮಿಲನ ಮಾಡುವುದೇ ಖುಷಿಯನ್ನು ಆಚರಿಸುವುದಾಗಿದೆ. ತಮ್ಮೆಲ್ಲರ ಪರಮಾತ್ಮ ಮಿಲನ, ಶ್ರೇಷ್ಠ ಆತ್ಮರ ಮಿಲನ ಪ್ರತೀ ಸಮಯ ಆಗುತ್ತದೆಯಲ್ಲವೆ. ಅಂದಮೇಲೆ ಪ್ರತೀ ಸಮಯ ಸಮಾರಂಭವೇ ಆಯಿತಲ್ಲವೆ. ಅಡಿರಿ, ನಲಿಯಿರಿ ಮತ್ತು ತಿನ್ನಿರಿ- ಇದೇ ಸಮಾರಂಭವಾಗಿರುತ್ತದೆ. ಬ್ರಹ್ಮಾತಂದೆಯ ಭಂಡಾರದಿಂದ ತಿನ್ನುತ್ತೀರಿ ಆದ್ದರಿಂದ ಸದಾ ಬ್ರಹ್ಮಾಭೋಜನವನ್ನು ತಿನ್ನುತ್ತೀರಿ. ಪ್ರವೃತ್ತಿಯವರೂ ಸಹ ತಮ್ಮ ಸಂಪಾದನೆಯಿಂದ ತಿನ್ನುವುದಿಲ್ಲ. ಸೇವಾಕೇಂದ್ರದಲ್ಲಿರುವವರು

ಸೇವಾಕೇಂದ್ರದ ಭಂಡಾರದಿಂದ ತಿನ್ನುವುದಿಲ್ಲ ಆದರೆ ಬ್ರಹ್ಮಾತಂದೆಯ ಭಂಡಾರದಿಂದ, ಶಿವತಂದೆಯ ಭಂಡಾರಿಯಿಂದ ತಿನ್ನುತ್ತೀರಿ. ನನ್ನ ಪ್ರವೃತ್ತಿಯೂ ಅಲ್ಲ, ನನ್ನ ಸೇವಾಕೇಂದ್ರವೂ ಅಲ್ಲ. ಪ್ರವೃತ್ತಿಯಲ್ಲಿದ್ದರೂ ಸಹ ಟ್ರಸ್ಟಿಯಾಗಿದ್ದೀರಿ. ತಂದೆಯ ಶ್ರೀಮತದ ಪ್ರಮಾಣ ನಿಮಿತ್ತರಾಗಿದ್ದೀರಿ ಮತ್ತು ಸೇವಾಕೇಂದ್ರದಲ್ಲಿದ್ದರೂ ಸಹ ತಂದೆಯ ಸೇವಾಕೇಂದ್ರವಾಗಿದೆಯೇ ಹೊರತು ನಿಮ್ಮದಲ್ಲ. ಆದ್ದರಿಂದ ಸದಾ ಶಿವತಂದೆಯ ಭಂಡಾರವಾಗಿದೆ. ಬ್ರಹ್ಮಾತಂದೆಯ ಭಂಡಾರವಾಗಿದೆ- ಈ ಸ್ಮೃತಿಯಿಂದ ಭಂಡಾರಿಯೂ ಸಂಪನ್ನವಾಗಿರುವುದು, ಭಂಡಾರವೂ ಸಂಪನ್ನವಾಗಿರುವುದು. ನನ್ನತನವನ್ನು ತಂದರೆ ಭಂಡಾರ ಮತ್ತು ಭಂಡಾರಿಯಲ್ಲಿ ಕೊರತೆ ಇರುತ್ತದೆ. ಯಾವುದೇ ಕಾರ್ಯದಲ್ಲಿ ಒಂದುವೇಳೆ ಯಾವುದೇ ಪ್ರಕಾರದ ಬೆರಿಕೆ ಅಥವಾ ಕೊರತೆಯಾಗುತ್ತಿದೆ ಎಂದರೆ ಇದಕ್ಕೆ ಕಾರಣ ತಂದೆಯ ಬದಲು ನನ್ನತನದ ಬೆರಿಕೆಯಿದ್ದಾಗ ಕೊರತೆಯಾಗುತ್ತದೆ. ಕೊರತೆಗೂ ಬೆರಿಕೆಯ ಶಬ್ಧವನ್ನು ಹೇಳಲಾಗುತ್ತದೆ. ಮತ್ತು ಅಶುದ್ದಿಯ ಬೆರಕೆಗೂ ಕಲ್ತಿ ಶಬ್ಧವನ್ನು ಹೇಳಲಾಗುತ್ತದೆ. ಹೇಗೆ ಚಿನ್ನದಲ್ಲಿ ಲೋಹವು ಬೆರಕೆಯಾಗುತ್ತದೆಯಲ್ಲವೆ ಆದರೆ ಬ್ರಾಹ್ಮಣ ಜೀವನವಂತೂ ಪ್ರತೀ ಸೆಕೆಂಡ್ ಸಮಾರಂಭವನ್ನು ಆಚರಿಸುವ ಶುಭಾಷಯಗಳ ಜೀವನವಾಗಿದೆ. ತಿಳಿಯಿತೆ-

ಹೇಗೆ ಇಂದಿನ ದಿನ ತಾವೆಲ್ಲರೂ ಶಬ್ಧದಿಂದ ದೂರವಾಗುತ್ತೀರಿ ಮತ್ತು ಬಾಪ್‌ದಾದಾ ಯಾರು ಶಬ್ದದಿಂದ ದೂರವಿದ್ದಾರೆಯೋ ಅವರನ್ನು ಶಬ್ದದಲ್ಲಿ ತರುತ್ತೀರಿ. ಈ ಅಭ್ಯಾಸವು ಬಹಳ ಚೆನ್ನಾಗಿದೆ. ಈಗೀಗ ಬಹಳ ಶಬ್ದದಲ್ಲಿರುತ್ತೀರಿ. ಭಲೆ ಚರ್ಚೆ ಮಾಡುತ್ತಿರಬಹುದು ಅಂತಹ ವಾತಾವರಣದಲ್ಲಿಯೂ ಸಂಕಲ್ಪ ಮಾಡಿದ ಕೂಡಲೇ ಶಬ್ಧದಿಂದ ದೂರವಾಗಿಬಿಡಿ. ಸೆಕೆಂಡಿನಲ್ಲಿ ಶಬ್ದದಿಂದ ಭಿನ್ನ ಫರಿಶ್ತಾಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. ಈಗೀಗ ಕರ್ಮಯೋಗಿ, ಈಗೀಗ ಫರಿಶ್ತಾ ಅರ್ಥಾತ್ ಶಬ್ಧದಿಂದ ದೂರ ಅವ್ಯಕ್ತ ಸ್ಥಿತಿಯಿರಲಿ, ವಾತಾವರಣವು ಬಹಳ ಶಬ್ದದಿಂದ ಕೂಡಿದೆ ಆದ್ದರಿಂದ ಶಬ್ದದಿಂದ ಭಿನ್ನವಾಗಲು ಸಮಯ ಬೇಕು ಎಂದಲ್ಲ. ಈ ರೀತಿಯಾಗಬಾರದು ಏಕೆಂದರೆ ಅಂತಿಮ ಸಮಯದಲ್ಲಿ ನಾಲ್ಕಾರು ಕಡೆಯ ವ್ಯಕ್ತಿಗಳ, ಪ್ರಕೃತಿಯ ಏರುಪೇರು ಮತ್ತು ಶಬ್ಧವಿರುವುದು. ಕೂಗಾಡುವ, ಚೀರಾಡುವ ವಾಯುಮಂಡಲವೇ ಇರುವುದು. ಇಂತಹ ಸಮಯದಲ್ಲಿಯೇ ಸೆಕೆಂಡಿನಲ್ಲಿ ಅವ್ಯಕ್ತ ಫರಿಶ್ತಾ ಸೋ ನಿರಾಕಾರಿ ಅಶರೀರಿ ಆತ್ಮನಾಗಿದ್ದೇನೆ ಎಂಬ ಅಭ್ಯಾಸವೇ ವಿಜಯಿಯನ್ನಾಗಿ ಮಾಡುವುದು. ಈ ಸ್ಮೃತಿಯೇ ಸ್ಮರಣೆ ಅರ್ಥಾತ್ ವಿಜಯಮಾಲೆಯಲ್ಲಿ ತರುವುದು ಆದ್ದರಿಂದ ಈ ಅಭ್ಯಾಸವು ಈಗಿನಿಂದ ಅತಿ ಅವಶ್ಯಕವಾಗಿದೆ. ಅವರಿಗೇ ಪ್ರಕೃತಿಜೀತರು. ಮಾಯಾಜೀತರೆಂದು ಹೇಳಲಾಗುವುದು. ಮಾಲೀಕರಾಗಿ ಭಲೆ ಮುಖದ ಸಂಗೀತವನ್ನು ನುಡಿಸಿರಿ. ಕಿವಿಗಳ ಮುಖಾಂತರ ಕೇಳಿರಿ. ಒಂದುವೇಳೆ ಬೇಕಿಲ್ಲದಿದ್ದರೆ ಸೆಕೆಂಡಿನಲ್ಲಿ ಫುಲ್ ಸ್ಟಾಪ್, ಅರ್ಧಸ್ಟಾಪ್ ಅಲ್ಲ. ಫುಲ್ ಸ್ಟಾಪ್. ಇದೇ ಬ್ರಹ್ಮಾತಂದೆಯ ಸಮಾನರಾಗುವುದಾಗಿದೆ. ಸ್ನೇಹದ ಚಿಹ್ನೆಯು ಸಮಾನರಾಗುವುದಾಗಿದೆ. ನನ್ನ ಸ್ನೇಹವು ಹೆಚ್ಚಿನದಾಗಿದೆ ಎಂದು ಪ್ರತಿಯೊಬ್ಬರೂ ಹೇಳುತ್ತಾರೆ. ಯಾರ ಸ್ನೇಹವು ಬ್ರಹ್ಮಾತಂದೆಯೊಂದಿಗೆ ಸ್ನೇಹ ಹೆಚ್ಚಿನದಾಗಿದೆ ಎಂದು ಯಾರೊಂದಿಗಾದರೂ ಕೇಳಿರಿ. ನನ್ನ ಸ್ನೇಹ ಹೆಚ್ಚಿನದಾಗಿದೆ ಎಂದೇ ಎಲ್ಲರೂ ಹೇಳುತ್ತಾರೆ. ಒಂದುವೇಳೆ ಹೇಗೆ ಸ್ನೇಹದಲ್ಲಿ ನನ್ನ ಸ್ನೇಹವು ಹೆಚ್ಚಿನದಾಗಿದೆ ಎಂದು ತಿಳಿಯುತ್ತೀರೋ ಹಾಗೆಯೇ ಸಮಾನರಾಗುವುದರಲ್ಲಿಯೂ ತೀವ್ರಪುರುಷಾರ್ಥ ಮಾಡಿರಿ- **ನಾನು ನಂಬರ್‌ವನ್ ಅತ್ಮನ ಜೊತೆ. ಜೋಡಿ(ದಂಪತಿ) ಮಣಿಗಳ ಜೊತೆ ಮಾಲೆಯಲ್ಲಿ ಪೋಣಿಸಲ್ಪಡಬೇಕು. ಇದನ್ನೇ ಸ್ನೇಹದ ರಿಟರ್ನ್ ಕೊಡುವುದೆಂದು ಹೇಳುತ್ತಾರೆ.** ಸ್ನೇಹದಲ್ಲಿ ಮಧುಬನಕ್ಕೆ ಓಡೋಡಿ ಬರುವುದರಲ್ಲಿ ಬುದ್ಧಿವಂತರಾಗಿದ್ದೀರಿ. ಹಾಗೆಯೇ ಸಮಾನರಾಗುವ ಪ್ರತ್ಯಕ್ಷ ಸ್ವರೂಪವನ್ನು ತೋರಿಸಿರಿ. ಸ್ಥಾನವು ಚಿಕ್ಕದಾಗಿದೆ ಮತ್ತು ಹೃದಯವು ದೊಡ್ಡದಾಗಿದೆ ಆದ್ದರಿಂದ ನಮಗೆ ಸ್ಥಳ ಸಿಗಲಿಲ್ಲವೆಂದು ದೂರು ಕೊಡಬೇಡಿ. ಹೃದಯವು ದೊಡ್ಡದಾಗಿದ್ದರೆ ಪ್ರೀತಿಯಲ್ಲಿ ಯಾವುದೇ ಕಷ್ಟವು ಕಷ್ಟವೆನಿಸುವುದಿಲ್ಲ ಬಾಪ್‌ದಾದಾರವರಿಗೆ ಮಕ್ಕಳ ಕಷ್ಟವನ್ನೂ ಸಹ ನೋಡಲು ಇಷ್ಟವಾಗುವುದಿಲ್ಲ. ಹಾಗೇ ಯೋಗ ಮಾಡಿರಿ, ಸ್ಥಾನವು ತಯಾರಾಗಿಬಿಡುವುದು ಒಳ್ಳೆಯದು-

**ನಾಲ್ಕಾರು ಕಡೆಯ ದೇಶ-ವಿದೇಶದ ಸ್ನೇಹದಲ್ಲಿ ಸಮಾವೇಶವಾಗಿರುವ ಶ್ರೇಷ್ಠಾತ್ಮರ ಬಹಳ-ಬಹಳ ಸಂಕಲ್ಪದ ಮೂಲಕ, ಪತ್ರಗಳ ಮೂಲಕ, ಸಂದೇಶಗಳ ಮೂಲಕ ಈ ಸ್ಮೃತಿಯ ದಿವಸ ಹಾಗೂ ಹೊಸ ವರ್ಷದ ನೆನಪು-ಪ್ರೀತಿಯು ಬಾಪ್‌ದಾದಾರವರಿಗೆ ತಲುಪಿತು,**

ಎಲ್ಲರ ಹೃದಯದ ಮಧುರಾತಿ ಮಧುರ ಸಂಗೀತವನ್ನು ಬಾಪ್‌ದಾದಾ ಕೇಳಿದೆವು. ಅದಕ್ಕೆ ಪ್ರತಿಯಾಗಿ ಬಾಪ್‌ದಾಬಾ ಎಲ್ಲಾ ಮಕ್ಕಳನ್ನು ಮಧುರಾತಿ ಮಧುರ ಪ್ರಿಯಾತಿಪ್ರಿಯ ಮಕ್ಕಳೇ ಎಂದು ಹೇಳಿ ನೆನಪು-ಪ್ರೀತಿಯನ್ನು ಕೊಡುತ್ತಿದ್ದೇವೆ. ಹಾರುತ್ತಿದ್ದೀರಿ ಮತ್ತು ತೀವ್ರಗತಿಯಿಂದ ಹಾರುತ್ತಾ ಇರಿ. ಮಾಯೆಯ ಆಟವನ್ನು ಆಟಗಾರನಾಗಿ ನೋಡುತ್ತಾ ನಡೆಯಿರಿ. ಪ್ರಕೃತಿಯ ಪರಿಸ್ಥಿತಿಗಳನ್ನು ಪಾರುಮಾಡಿ ಸರ್ವಶಕ್ತಿವಂತರಾಗಿ ಆಟವೆಂಬಂತೆ ಪಾರು ಮಾಡುತ್ತಾ ಹೋಗಿ ತಂದೆಯ ಕೈ ಮತ್ತು ದಿವ್ಯಬುದ್ಧಿ ಯೋಗರೂಪಿ ಜೊತೆಯನ್ನು ಸದಾ ಅನುಭವ ಮಾಡಿ ಸಮರ್ಥರಾಗಿ, ಸದಾ ಪಾಸ್-ವಿತ್-ಆನರ್ ಆಗುತ್ತಾ ನಡೆಯಿರಿ. ಸದಾ ಸ್ನೇಹಮೂರ್ತಿಭವದ ವರದಾನವನ್ನು ಸ್ಮೃತಿಯಲ್ಲಿ ನೆನಪಿಟ್ಟುಕೊಳ್ಳುವ ಸರ್ವಸ್ನೇಹಿ ಮೂರ್ತಿಗಳಿಗೆ ಸದಾ ಮಾಸ್ಟರ್ ದಾತಾ ಅತ್ಮರಿಗೆ ಮಾತಾಪಿತರ ಶಕ್ತಿ ಸಂಪನ್ನ ನೆನಪು-ಪ್ರೀತಿ ಹಾಗೂ ನಮಸ್ತೆ.

**ಪಾರ್ಟಿಗಳ ಜೊತೆಯಲ್ಲಿ ಅವ್ಯಕ್ತ ಬಾಪ್‌ದಾದಾರವರ ಭೇಟಿ:**

ನಾವೆಲ್ಲರೂ ಪೂಜ್ಯ ಮತ್ತು ಪೂರ್ವಜ ಆತ್ಮರು ಈ ರೀತಿ ನಡೆಯಿರುತ್ತದೆಯೇ? ನೀವೆಲ್ಲರೂ ಈ ಸೃಷ್ಟಿ ರೂಪಿ ವೃಕ್ಷದ ಬುಡದಲ್ಲಿ ಕುಳಿತುಕೊಂಡಿದ್ದೀರಲ್ಲವೇ? ಆದಿ ತಂದೆಯ ಮಕ್ಕಳು ಆದಿ ರತ್ನಗಳಾಗಿರುವಿರಿ. ಎಂದರೆ ಈ ವೃಕ್ಷದ ಬುಡವೂ ಸಹ ನೀವಾಗಿರುವಿರಿ. ಯಾವುದೆಲ್ಲಾ ರೆಂಬೆ ಕೊಂಬೆಗಳು ಹೊರಹೊಮ್ಮುತ್ತವೆಯೋ. ಅವುಗಳು ಬೀಜದ ನಂತರ ಬುಡದಿಂದಲೇ ಹೊರಹೊಮ್ಮುತ್ತವೆ. ಎಂದರೆ ಎಲ್ಲದಕ್ಕಿಂತ ಆದಿ ಧರ್ಮದವರು ನೀವು ಆತ್ಮಗಳಾಗಿರುವಿರಿ ಅನ್ಯರೆಲ್ಲರೂ ನಿಮ್ಮ ನಂತರ ಬರುವವರು ಆದ್ದರಿಂದ ನೀವು ಪೂರ್ವಜರಾಗಿದ್ದೀರಿ. ಹಾಗಾದರೆ ನೀವು ತಳಪಾಯವಾಗಿದ್ದೀರಿ. ತಳಪಾಯ ಎಷ್ಟು ಪಕ್ಕಾ ಆಗಿರುತ್ತದೆಯೋ ಅಷ್ಟು ರಚನೆಯೂ ಸಹ ಪಕ್ಕಾ ಆಗಿರುತ್ತದೆ. ಹಾಗಾದರೆ ಇಷ್ಟು ಗಮನ ತಮ್ಮ ಮೇಲೆ ಇಟ್ಟುಕೊಳ್ಳಬೇಕು. ಪೂರ್ವಜರು ಅರ್ಥಾತ್ ಬುಡವಾಗಿರಿವ ಕಾರಣ ಡೈರೆಕ್ಟ್ ಬೀಜದ ಜೊತೆಯಲ್ಲಿ ಸಂಬಂಧವಿರುತ್ತದೆ. ತಾವು ನಶೆಯಿಂದ ಹೇಳಬಹುದು ನಾವು ಡೈರೆಕ್ಟ್ ಪರಮಾತ್ಮನ ಮೂಲಕ ರಚನೆಯಾಗಿದ್ದೇವೆ. ಪ್ರಪಂಚದವರನ್ನು ಕೇಳಿ ರಚನೆಯನ್ನು ಮಾಡಿದವರು ಯಾರು? ಆಗ ಹೇಳಿಕೆ-ಕೇಳಿಕೆಯ ಮಾತುಗಳನ್ನು ಹೇಳಿಬಿಡುತ್ತಾರೆ ಭಗವಂತ ರಚನೆ ಮಾಡಿದರು ಎಂದು ಹೇಳುತ್ತಾರೆ. ಆದರೆ ಹೇಳುವುದಕ್ಕಷ್ಟೆ ಮತ್ತು ನೀವು ಡೈರೆಕ್ಟ್ ಪರಮಾತ್ಮನ ರಚನೆಯಾಗಿದ್ದೀರಿ. ಇಂದಿನ ಬ್ರಾಹ್ಮಣರೂ ಹೇಳುತ್ತಾರೆ ನಾವು ಬ್ರಹ್ಮನ ಮಕ್ಕಳೆಂದು ಆದರೆ ಬ್ರಹ್ಮನ ಮಕ್ಕಳು ನೀವಾಗಿದ್ದೀರಿ, ಹಾಗಾದರೆ ನಾವು ಡೈರೆಕ್ಟ್ ಪರಮಾತ್ಮನ ಮಕ್ಕಳೆಂದು ಖುಷಿ ಇದೆ. ಯಾವುದೇ ಮಹಾನ್ ಅತ್ಮ ಧರ್ಮಾತ್ಮರ ರಚನೆಯಲ್ಲಿ ಡೈರೆಕ್ಟ್ ಪರಮಾತ್ಮನ ರಚನೆಯಾಗಿದ್ದೇವೆ. ಹಾಗಾದರೆ ಡೈರೆಕ್ಟ್ ಎಷ್ಟು ಶಕ್ತಿ ಇರಬಹುದು ಪ್ರಪಂಚದವರು ಹುಡುಕುತ್ತಿದ್ದಾರೆ. ಯಾವುದಾದರೂ ವೇಷದಲ್ಲಿ ಭಗವಂತ ಬರುತ್ತಾರೆಂದು ಮತ್ತು ನೀವು ಹೇಳುತ್ತೀರಿ ಸಿಕ್ಕಿಬಿಟ್ಟಿದ್ದಾರೆ. ಹಾಗಾದರೆ ಎಷ್ಟು ಖುಷಿ ಇದೆ. ಇಷ್ಟು ಖುಷಿ ಇದೆಯೆಂದರೆ ನಿಮ್ಮನ್ನು ನೋಡಿ ಅನ್ಯರೂ ಸಹ ಖುಷಿಯಾಗಿ ಬಿಡಬೇಕು, ಖುಷಿಯಾಗಿರುವವರ ಚಹರೆ ಸದಾ ಖುಷಿಯ ಅದೃಷ್ಟಶಾಲಿಯಾಗಿರುತ್ತದೆ.

**ಗ್ಲೋಬಲ್ ಹಾಸ್ಪಿಟಲ್‌ನ ಸಹೋದರ ಸಹೋದರಿಯರ ಪ್ರತಿ:-**

ಹಾಸ್ಪಿಟಲ್‌ಗೆ ದುಃಖದಲ್ಲಿರುವವರು ಬಂದರೆ ಖುಷಿಯಾಗುತ್ತಾರೆಯೇ? ವಾತಾವರಣ ಈ ರೀತಿ ಖುಷಿಯದ್ದಾಗಿದೆ. ಯಾರೆ ಬಂದರೂ ದುಃಖವನ್ನು ಮರೆತುಬಿಡಲಿ ಏಕೆಂದರೆ ವ್ಯಕ್ತಿಯ ಪ್ರಕಂಪನಗಳಿಂದ ವಾತಾವರಣ ನಿರ್ಮಾಣವಾಗುತ್ತದೆ. ಯಾವುದೇ ದುಃಖಿ ಆತ್ಮರ ಸಂಘಟನೆ ಇದ್ದರೆ ಅಲ್ಲಿಯ ವಾತಾವರಣ. ದುಃಖದ್ದಾಗಿ ಬಿಡುತ್ತದೆ. ಅಲ್ಲಿ ಯಾರಾದರೂ ನಗುತ್ತಾ ಬಂದರೂ ಸಹ ಅವರು ಸುಮ್ಮನಾಗಿಬಿಡುತ್ತಾರೆ. ಮತ್ತು ಎಲ್ಲ ಖುಷಿಯಲ್ಲಿರುವಂತಹ ವ್ಯಕ್ತಿಗಳ ಸಂಘಟನೆಯಲ್ಲಿ, ಖುಷಿಯ ಸಂಘಟನೆಯಲ್ಲಿ ಎಂತಹದ್ದೇ ದುಃಖಿ ಆತ್ಮರೇ ಬಂದರೂ ಪರಿವರ್ತನೆಯಾಗಿಬಿಡುತ್ತಾರೆ. ಪ್ರಭಾವವಂತೂ ಖಂಡಿತವಾಗಿ ಬೀರುತ್ತದೆ. ಎಂದಮೇಲೆ ಎವರ್‌ಹೇಪಿ ಹಾಸ್ಪಿಟಲ್

ಆಗಿದೆಯಲ್ಲವೇ? ಕೇವಲ ಹೆಜ್ಜೆಯಲ್ಲ, ಹ್ಯಾಪಿ ಸಹ, ಎಲ್ಲರೂ ಮುಗುಳ್ನಗುತ್ತಾ ಇರುತ್ತೀರಿ, ನಗುತ್ತಾ ಇದ್ದರೆ ಅದೇ ಅರ್ಧ ಔಷಧಿಯಾಗಿಬಿಡುತ್ತದೆ. ಅರ್ಧ ಔಷಧಿ ಖುಷಿಯಾಗಿದೆ. ಹಾಗಾದರೆ ಔಷಧಿಯ ಖರ್ಚೂ ಸಹ ಉಳಿತಾಯವಾಯಿತಲ್ಲವೇ. ಕಡಿಮೆ ಖರ್ಚಿನಲ್ಲಿ ನಿರೋಗಿಯಾಗಿಬಿಟ್ಟೆ ಎಂದು ರೋಗಿಗಳೂ ಖುಷಿಯಾಗಿಬಿಡುತ್ತಾರೆ ಮತ್ತು ಹಾಸ್ಪಿಟಲ್ ನ ಖರ್ಚೂ ಕಡಿಮೆಯಾಗಿ ಬಿಡುತ್ತದೆ. ವೈದ್ಯರಿಗೆ ಸಮಯವೂ ಉಳಿತಾಯವಾಗುತ್ತದೆ. ಹೇಗೆ ಸಾಕಾರದಲ್ಲಿ ನೋಡಿದಿರಿ. ಬ್ರಹ್ಮಾ ತಂದೆಯವರ ಮುಂದೆ ಬಂದಾಗ ಏನು ಅನುಭವ ಹೇಳುತ್ತಾರೆ? ಬಹಳ 'ಮಾತುಗಳನ್ನು ತೆಗೆದುಕೊಂಡು ಬರುತ್ತಿದ್ದರು ಆದರೆ ತಂದೆಯವರ ಮುಂದೆ ಬಂದಂತೆ, ಆ ಮಾತುಗಳ ಪರಿಹಾರ ಒಳಗಿಂದೊಳಗೇ ಸಿಗುತ್ತಿತ್ತು. ಈ ಅನುಭವಗಳನ್ನು ಕೇಳಿದ್ದೀರಲ್ಲವೇ? ಈ ರೀತಿ ನೀವು ಡಾಕ್ಟರ್ಸ್‌ಗಳ ಮುಂದೆ ಯಾರೆ ಬಂದಾಗ ಅರ್ಧ ರೋಗ ಬರುತ್ತಿಂದಂತೆಯೇ ಅಲ್ಲೇ ವಾಸಿಯಾಗಬೇಕು. ಎಲ್ಲಾ ಡಾಕ್ಟರ್ಸ್ ಈ ರೀತಿ ಇದ್ದೀರಲ್ಲವೇ? ಹೇಗೆ ತಂದೆ ಅಲೌಕಿಕವಾಗಿದ್ದಾರೆ ಎಂದಮೇಲೆ ತಂದೆಯ ಮಕ್ಕಳು ಯಾವಕಾರ್ಯದ ನಿಮಿತ್ತವಾಗಿದ್ದಾರೆಯೋ ಅದೆಲ್ಲವೂ ಅಲೌಕಿಕವಾಗಿದೆಯಲ್ಲವೇ. ನಿಮ್ಮ ಜೀವನವು ಅಲೌಕಿಕವಾಗಿದೆಯೇ ಅಲೌಕಿಕ ಜೀವನವಿದೆಯೇ ಅಥವಾ ಸಾಧಾರಣ ಜೀವನವಿದೆಯೇ? ಎಷ್ಟೆಷ್ಟು ತಪಸ್ಸಿನಲ್ಲಿ ಮುಂದುವರೆಯುತ್ತಾ ಹೋಗುತ್ತೀರೋ ಅಷ್ಟೇ ನಿಮ್ಮ ಪ್ರಕಂಪನಗಳು ಬಹಳ ತೀವ್ರ ಗತಿಯಿಂದ ಕಾರ್ಯವನ್ನು ಮಾಡುತ್ತವೆ. ಒಳ್ಳೆಯದು. ಕಡಿಮೆ ಖರ್ಚು ಹೆಚ್ಚು ಪ್ರಾಪ್ತಿಯ ಆಸ್ಪತ್ರೆಯಾಗಿರಬೇಕು. ಸಮಯವೂ ಕಡಿಮೆ ಖರ್ಚಾಗಲಿ ಹಾಗು ಸ್ಥೂಲ ಧನವೂ ಕಡಿಮೆ ಖರ್ಚು ಹಾಗು ಹೆಚ್ಚು ಪ್ರಾಪ್ತಿ. ಹೆಸರು ದೊಡ್ಡದು ಹಾಗು ಖರ್ಚು ಕಡಿಮೆ. ಇಂತಹ ಅಲೌಕಿಕ ಸೇವಾಧಾರಿಯಾಗಿದ್ದೀರಾ! ತಳಪಾಯ ಚೆನ್ನಾಗಿ ಹಾಕಿದ್ದೀರಲ್ಲವೇ? ಆಸ್ಪತ್ರೆ ಅನ್ನಿಸುತ್ತದೆಯೇ ಅಥವಾ ಯೋಗ ಭವನ ಅನ್ನಿಸುತ್ತದೆಯೇ? ಇಂತಹ ಶಬ್ಧವಿರುತ್ತದೆ ಇದು ಆಸ್ಪತ್ರೆಯಲ್ಲಿ ಆದರೆ ಯೋಗ ಕೇಂದ್ರವಾಗಿದೆ. ಹ್ಯಾಪಿ ಹೌಸ್ ಆಗಿದೆ. ಈ ರೀತಿ ಲೌಕಿಕದಲ್ಲೂ ಹ್ಯಾಪಿ ಹೌಸನ್ನಾಗಿ ಮಾಡುತ್ತೀರಾ? ಯಾರೇ ಒಳಗೆ ಹೋಗುತ್ತಾರೆಂದರೆ ನಗುತ್ತಲೇ ಇರುತ್ತಾರೆ. ಆದರೆ ಈ ಮನಸ್ಸಿನ ಮುಗುಳ್ನಗೆ ಇದೆಯೇ? ಅದಾಗುತ್ತದೆ ಸ್ವಲ್ಪ ಸಮಯಕ್ಕೋಸ್ಕರ ಹಾಗು ಇದಾಗಿದೆ ಸದಾಕಾಲಕ್ಕೋಸ್ಕರ, ಒಳ್ಳೆಯದು. ಸದಾ ಹರ್ಷಿತ ಮೂಡಿನಲ್ಲಿ ಇರಬೇಕು. ಏನೇ ಆಗಿಬಿಡಲಿ ಮೂಡ್ ಆಫ್(ಬೇಸರ) ಆಗಬಾರದು. ಯಾರೆ ನಿಂದನೆ ಮಾಡಲಿ. ಗ್ಲಾನಿ ಮಾಡಲಿ ಆದರೆ ನೀವು ಸದಾ ಹರ್ಷಿತರಾಗಿರಬೇಕು. ಒಳ್ಳೆಯದು, ಓಂ ಶಾಂತಿ.

ರಿವೈಸ್ ಕೋರ್ಸ್ 18-01-1992.

***ತಂದೆಯ ಮೇಲಿನ ಸ್ನೇಹದ ಚಿಹ್ನೆ - ತಂದೆಯ ಸಮಾನರಾಗುವುದು.***

ಸದಾ ಪ್ರತಿ ಸಮಯ, ಪ್ರತಿಯೊಬ್ಬ ಆತ್ಮನೊಂದಿಗೆ ಸ್ನೇಹ ಮೂರ್ತಿ ಭವ! ಎಂಬ ವರದಾನದಿಂದ ಈಗ ಸ್ನೇಹ ಮೂರ್ತಿಯಾಗಿ ಸ್ನೇಹದ ಗುಣ, ಸ್ನೇಹದ ವ್ಯವಹಾರ, ಸ್ನೇಹದ ಸಂಬಂಧ ಸಂಪರ್ಕಗಳನ್ನು ಸಂಭಾಳಿಸಬೇಕು. ಸ್ನೇಹದೃಷ್ಟಿ, ಸ್ನೇಹವೃತ್ತಿ, ಸ್ನೇಹಮಯ ಕೃತಿಯಿಂದ ಸ್ನೇಹ ಸೃಷ್ಟಿಯನ್ನು ತಯಾರು ಮಾಡಬೇಕು. ಮಾಸ್ಟರ್ ಸ್ನೇಹ ಸ್ವರೂಪ ಆತ್ಮರಾದ ನೀವು ದಾತನಾಗಿ ಆತ್ಮಿಕ ಸ್ನೇಹವನ್ನು ಕೊಡುತ್ತಾ ಇರಬೇಕು. ಹೇಗಾದರೆ ಸತ್ಯವಾದ ಪ್ರೀತಿ, ಮಾತಾಪಿತರ ಪ್ರೀತಿ, ಆತ್ಮಿಕ ಪರಿವಾರದ ಪ್ರೀತಿ ನಿಮ್ಮನ್ನು ಆಕರ್ಷಣೆ ಮಾಡಿದೆಯೋ ಹಾಗೆಯೇ ನಮ್ಮ ಪ್ರೀತಿ ವಿಶ್ವಾತ್ಮರನ್ನು ಆಕರ್ಷಿಸಬೇಕು. ನನ್ನದು ಎಂಬುದೆಲ್ಲ ನಿನ್ನದು ಎಂಬುದರಲ್ಲಿ ಪರಿವರ್ತನೆ ಮಾಡಿ ಭಂಡಾರವನ್ನು ವೃದ್ಧಿ ಮಾಡಬೇಕು. ನಿರಾಕಾರಿ, ಅಶರೀರಿ ಆತ್ಮನಾಗುವ ಅಭ್ಯಾಸವುರುವುದರಿಂದಲೇ ಅಂತಿಮದಲ್ಲಿ ವಿಜಯೀ ಆಗಬಲ್ಲಿರಿ. ತೀವ್ರ ಪುರುಷಾರ್ಥ ಮಾಡಿ ಬ್ರಹ್ಮತಂದೆಯ ಸಮಾನವಾಗಿ ಆಗುವುದನ್ನೇ ಸ್ನೇಹಕ್ಕೆ ರಿಟರ್ನ್ ಕೊಡುವುದು ಎಂದು ಕರೆಯುತ್ತಾರೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಸ್ನೇಹದ ಭಾವನೆ ಮತ್ತು ಸಮಾನವಾಗಬೇಕು ಎಂಬ ಶ್ರೇಷ್ಠ ಕಾಮನೆಯ ಉತ್ಸಾಹ ಉಲ್ಲಾಸಗಳಲ್ಲಿ ಇದ್ದೇನೆ.

2. ನಾನು ಸ್ನೇಹಕ್ಕೆ ರಿಟರ್ನ್ ಆಗಿ ಸದಾ ಪ್ರತಿ ಸಮಯ, ಪ್ರತಿಯೊಬ್ಬ ಆತ್ಮನೊಂದಿಗೆ, ಪ್ರತಿ ಪರಿಸ್ಥಿತಿಯಲ್ಲಿ ಸ್ನೇಹ ಮೂರ್ತಿ ಭವ ಎಂಬ ವರದಾನದ ವರದಾನಿ.

3. ನಾನು ಪ್ರಕೃತಿ, ಮಾಯೆ, ವ್ಯಕ್ತಿಯ ಎಂತಹ ವಿಕರಾಳ ರೂಪ, ಜ್ವಾಲಾ ರೂಪವನ್ನಾದರೂ ಸ್ನೇಹ ಎಂಬ ಶೀತಲತೆಯಿಂದ ಪರಿವರ್ತನೆ ಮಾಡಿದ್ದೇನೆ.

4. ನಾನು ಸದಾ ಸ್ನೇಹದೃಷ್ಟಿ, ಸ್ನೇಹವೃತ್ತಿ, ಸ್ನೇಹಮಯ ಕೃತಿಯಿಂದ ಸ್ನೇಹ ಸೃಷ್ಟಿಯನ್ನು ತಯಾರು ಮಾಡಿದ್ದೇನೆ.

5. ಯಾರು ಸ್ನೇಹವನ್ನು ಕೊಡದೆ ಇದ್ದರೂ ನಾನು ಸದಾ ಆತ್ಮಿಕ ಸ್ನೇಹವನ್ನು ಕೊಡುತ್ತಾ ಇರುವ ಮಾಸ್ಟರ್ ಸ್ನೇಹ ಸ್ವರೂಪ.

6. ನಾನು ಸತ್ಯವಾದ, ನಿಸ್ವಾರ್ಥವಾದ, ಬಾಪ್‌ದಾದಾರವರ ಸಮಾನವಾದ ಪ್ರೀತಿಯಿಂದ ವಿಶ್ವಾತ್ಮರನ್ನು ತಂದೆಗೆ ಆಕರ್ಷಣೆ ಮಾಡಿದ್ದೇನೆ.

7. ನಾನು ಪ್ರತಿಕ್ಷಣ ನವೀನತೆ, ಹೊಸ ಉತ್ಸಾಹ ಉಲ್ಲಾಸಗಳು, ಸ್ವಯಂನಲ್ಲಿ ನವೀನತೆ ಅರ್ಥಾತ್ ದಿವ್ಯತೆಯ ವಿಶೇಷತೆಯನ್ನು ಅನುಭವ ಮಾಡಿಕೊಂಡಿರುವ ರೆಕಾರ್ಡನ್ನು ಇಟ್ಟುಕೊಂಡಿದ್ದೇನೆ.

8. ನಾನು ಪ್ರತಿ ಸಮಯ ಪರಮಾತ್ಮನ ಮಿಲನ ಮತ್ತು ಶ್ರೇಷ್ಠ ಆತ್ಮ ರ ಮಿಲನವನ್ನು ಆಚರಿಸಿಕೊಳ್ಳುವುದರಿಂದ ಖುಷಿದ ಸಮಯವನ್ನು ಕಳೆದು ಸಮಾರಂಭವನ್ನು ಆಚರಿಸಿಕೊಂಡಿದ್ದೇನೆ.

9. ನಾನು ಸೇವಾ ಕೇಂದ್ರದಲ್ಲಿದ್ದರೂ, ಮನೆಯಲ್ಲಿದ್ದರೂ ನನ್ನದು ಎಂಬುದಲ್ಲವನ್ನನೂ ಬ್ರಹ್ಮತಂದೆ ಮತ್ತು ಶಿವ ತಂದೆಯ ಭಂಡಾರ ಎಂದು ಭಾವಿಸುವುದರಿಂದ ಭಂಡಾರಿಯ ವೃದ್ಧಿಯನ್ನು ಮಾಡಿಕೊಂಡಿದ್ದೇನೆ.

10. ನಾನು ಕ್ಷಣದಲ್ಲಿ ಶಬ್ದದಿಂದ ಅತೀತವಾಗಿ ಫರಿಶ್ತಾ ಸ್ಥಿತಿಯಲ್ಲಿ ಅವ್ಯಕ್ತ ಫರಿಶ್ತಾನಿಂದ ನಿರಾಕಾರ ಆತ್ಮ ಎಂಬ ಬಹಳ ಕಾಲದ ಅಭ್ಯಾಸದಿಂದ ಅಂತಿಮದಲ್ಲಿ ಬರುವ ವ್ಯಕ್ತಿ, ಪ್ರಕೃತಿ, ಮಾಯೆಯ, ಏರುಪೇರಿನಿಂದ ವಿಜಯವನ್ನು ಪಡೆದಿರುವ ವಿಜಯಿಮಾಲೆಯ ಮಣಿ.

11. ನಾನು ಹೇಗಾದರೆ ಬ್ರಹ್ಮಾ ತಂದೆಯ ಮೇಲೆ ನನಗೆ ಹೆಚ್ಚು ಸ್ನೇಹವಿದೆ ಎಂದು ಹೇಳುತ್ತೇನೆಯೋ ಹಾಗೆಯೇ ಸಮಾನವಾಗುವುದರಲ್ಲಿ ಕೂಡ ತೀವ್ರ ಪುರುಷಾರ್ಥ ಮಾಡುವ ನಂಬರ್ ವನ್ ಆತ್ಮ.

12. ನಾನು ದಂಪತಿ(ಜೋಡಿ) ಮಣಿಗಳ ಜೊತೆ ಇರುವ ಮಣಿಯಾಗಿ ಮಾಲೆಯಲ್ಲಿ ಪೋಣಿಸಲ್ಪಟ್ಟಿದ್ದೇನೆ.